ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಅನುದಾನ ಹೆಚ್ಚಳ

719 - ಶ್ರೀ ಎಸ್.ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ/

ಅ) *ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ರಾಜ್ಯ ಸರ್ಕಾರ ವಾರ್ಷಿಕ ಅನುದಾನ ಕನಿಷ್ಠ 60 ಕೋಟಿ ರೂಪಾಯಿಗೆ ಹೆಚ್ಚಿಸಲು ಸರ್ಕಾರಕ್ಕೆ ಇರುವಂತಹ ತೊಂದರೆಗಳೇನು?*

ಆ) *ಈ ಪ್ರದೇಶದ ಶಾಸಕರ ಒಮ್ಮತದ ಅಭಿಪ್ರಾಯ ಬೇಡಿಕೆ ಇದ್ದಾಗ್ಯೂ ಸರ್ಕಾರ ವಾರ್ಷಿಕವಾಗಿ ಕೇವಲ 30 ಕೋಟಿ ರೂಪಾಯಿಗಳ ಅನುದಾನ ಕೊಟ್ಟಿರುವ ಹಿನ್ನೆಲೆ ಏನು; ಹಾಗೂ ಇದನ್ನು ಪುನರ್ವಿಶಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಆ) ಸಂಪನ್ಮೂಲಗಳನ್ನು ಆಧಾರಿಸಿ ಹಾಗೂ ಆದ್ಯತೆಯ ಮೇಲೆ ಪ್ರತಿಯೊಂದು ಇಲಾಖೆಗೆ ಹಣವನ್ನು ನಿಗಧಿ ಪಡಿಸಲಾಗುವುದು.

ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ : ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಡಿ. ಮಂಜುನಾಥ್ (ಅಧ್ಯಕ್ಷರು) : ಆರ್ಥಿಕ ಸಾಂಸ್ಥಿಕ ಹಣಕಾಸು, ಸಾಂಖ್ಯಿಕ, ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಮಿತಿ) : ಮಾನ್ಯ ಅಧ್ಯಕ್ಷರೆ, ಆರ್ಥಿಕ, ಸಾಂಸ್ಥಿಕ, ಸಾಂಖ್ಯಿಕ ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖಾ ವಿಷಯ ಸಮಿತಿಯ 1996-97ನೇ ಸಾಲಿನ ಎರಡನೆ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ಚುನಾವಣಾ ಪ್ರಸ್ತಾವ

ಶ್ರೀ ಎಂ. ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರಚಾರ ಇಲಾಖಾ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, 1994ನೇ ಇಸವಿಯ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಶಾಸನ 21(1) (7)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯ ನೀತಿಗೆ ಅನುಸಾರವಾಗಿ ಈ ಸಭೆಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟಿಗೆ ಮೂರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರವರು :

ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ: 18-03-1997 ರಂದು ಸಭೆ ಸೇರಿ, ಪ್ರಸ್ತುತ ಅಧಿವೇಶನದಲ್ಲಿ ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿರುತ್ತದೆ.

19-03-1997 ರಿಂದು ಬುಧವಾರ 21-03-1997ರ ವರೆಗೆ ಶುಕ್ರವಾರ	1. ಪ್ರಶ್ನೋತ್ತರ 2. ಗಮನ ಸೆಳೆಯುವ ಸೂಚನೆಗಳು 3. 1997-98ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ
24-03-1997 ಸೋಮವಾರ ಹಾಗೂ 25-03-1997 ಮಂಗಳವಾರ	1. ಪ್ರಶ್ನೋತ್ತರ 2. ಗಮನ ಸೆಳೆಯುವ ಸೂಚನೆಗಳು 3. 1997-98ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ
26-03-1997 ಬುಧವಾರ	1. ಪ್ರಶ್ನೋತ್ತರ 2. ಗಮನ ಸೆಳೆಯುವ ಸೂಚನೆಗಳು 3. 1997-98ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ಹಾಗೂ ಉತ್ತರ 4. <u>ಶಾಸನ ರಚನೆ</u> (ಅ) ಧನವಿನಿಯೋಗ ವಿಧೇಯಕ (ಆ) ತೆರಿಗೆ ವಿಧೇಯಕಗಳು
27-03-1997 ಗುರುವಾರ	1. ಪ್ರಶ್ನೋತ್ತರ 2. ಪೂರಕ ಅಂದಾಜುಗಳ ಮೇಲೆ ಚರ್ಚೆ ಹಾಗೂ ಉತ್ತರ 3. ಶಾಸನ ರಚನೆ (ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು. (ಆ) ಧನವಿನಿಯೋಗ ವಿಧೇಯಕ (ಪೂರಕ ಅಂದಾಜುಗಳು)

ವಿಧಾನ ಸಭೆಯು ದಿನಾಂಕ: 20-03-1997 ರಿಂದ 27-03-1997ರ ವರೆಗೆ ಪ್ರತಿದಿನ ಬೆಳಿಗ್ಗೆ 10.00 ಘಂಟೆಯಿಂದ ಸಂಜೆ 6.00 ಘಂಟೆಯವರೆಗೆ ಸಭೆ ಸೇರಲಿದೆ.